ದಕ್ಷಿಣ ಕನ್ನಡ ಜಿಲ್ಲೆಯ ತುಂಬೆಯಲ್ಲಿ ತೋಟಗಾರಿಕಾ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣ

(2124): ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ):– ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ತುಂಬೆಯಲ್ಲಿ ತೋಟಗಾರಿಕಾ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣವೆಷ್ಟು;

ಆ. ಈ ಜಮೀನನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸುವ ಆಲೋಚನೆಯು ಸರ್ಕಾರಕ್ಕಿದೆಯೇ;

ಇ. ಈ ಜಮೀನನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳಾವುವು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. 26 ಎಕರೆ – 29 ಗುಂಟೆ

ಆ. ಇಲ್ಲ

ಇ. ಪ್ರತಿ ವರ್ಷ ಈ ಕ್ಷೇತ್ರದಲ್ಲಿ, ಮಳೆಗಾಲದಲ್ಲಿ 6 ಎಕರೆ ಪ್ರದೇಶದಲ್ಲಿ, ಬೇಸಿಗೆ ಕಾಲದಲ್ಲಿ 5 ಎಕರೆ ಪ್ರದೇಶದಲ್ಲಿ ತರಕಾರಿ ಬೀಜೋತ್ಪಾದನೆ ಮಾಡಲಾಗುತ್ತಿದೆ. ಉಳಿಕೆ ಪ್ರದೇಶದಲ್ಲಿ ಮುಂಬರುವ ವರ್ಷಗಳಲ್ಲಿ ಹಂತ, ಹಂತವಾಗಿ ತೆಂಗು, ಅಡಿಕೆ, ಸಾಂಬಾರು ಬೆಳೆಗಳನ್ನು ಹಾಕಿ ಅಭಿವೃದ್ಧಿಪಡಿಸಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕ್ ಹಿಡುವಳಿಯ ಕುರಿತು

(2102): ಶ್ರೀ ಆರ್.ಎನ್. ನಾಯಕ್ (ಭಟ್ಕಳ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಉತ್ತರ ಕನ್ನಡ ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕುಗಳಲ್ಲಿ ಅತಿ ಕಡಿಮೆ ಅಂದರೆ ಎಷ್ಟು ಬಾಗಾಯಿತ ಹಿಡುವಳಿ ಇರುವವರಿಗೆ ಸಾಲ ನೀಡಲಾಗುತ್ತದೆಯೇ;

ಆ. ಸಧ್ಯ ಇರುವ ಪದ್ಧತಿಯನ್ನು ಬದಲಿಸಿ ಹಿಡುವಳಿಯ ವಿಲೇಯನ್ನು ಇನ್ನೂ ಕಡಿಮೆ ಮಾಡಲು ಸಾಧ್ಯವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಅರ್ಧ ಎಕರೆ.

ಆ. ವಿಶೇಷ ಸಂದರ್ಭಗಳಲ್ಲಿ ಅಂದರೆ ವಿವಿಧೋದ್ದೇಶಗಳ ಯೋಜನೆಗಳಲ್ಲಿ ಯೋಜನೆಯ ಅರ್ಹತೆಯ ಮೇಲೆ ಕ್ಷೇತ್ರ ನಡುವಳಿಯ ಮಿತಿಗಿಂತ 5 ಗುಂಟೆಯವರೆಗೆ ಕಡಿಮೆ ಇದ್ದರೂ ಸಾಲ ನೀಡಲೂ ಪರಿಗಣಿಸಲಾಗುವುದು.

ಕನಕಪುರ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್ ಪ್ರಾರಂಭ

(2147): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನಕಪುರ ತಾಲ್ಲೂಕು ಕೇಂದ್ರದಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಯಾರ್ಡ್ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಎ.ಪಿ.ಎಂ.ಸಿ. **ಮಾರ್ಕೆಟ್ ಯಾರ್ಡ್**ನ್ನು ಪ್ರಾರಂಭ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮ ಏನು;

ಇ. ಇದನ್ನು **ಈ ವರ್ಷದಲ್ಲಿ ಪ್ರಾರಂಭ ಮಾಡಲು ಸರ್ಕಾ**ರ ಕ್ರಮ ತೆಗೆದುಕೊಂಡಿರುವುದೇ ?

ಶ್ರೀ ಮದನಗೋಪಾಲ ನಾಯಕ್ (ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು):–

ಅ. ಹೌದು

ಆ. ಕನಕಪುರದಲ್ಲಿ ಸ್ವಂತ ಉಪಮಾರುಕಟ್ಟೆ ಪ್ರಾಂಗಣವನ್ನು ನಿರ್ಮಾಣ ಮಾಡಲು ದಿನಾಂಕ: 29–12–1992ರಂದು 17 ಎಕರೆ 18 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನಕ್ಕಾಗಿ ಸುಮಾರು ರೂ. 7.36 ಲಕ್ಷ ವೆಚ್ಚವಾಗಬಹುದಾಗಿದ್ದು, ಇದರಲ್ಲಿ ರೂ. 2.50 ಲಕ್ಷ ಸರ್ಕಾರವು ಸಹಾಯ ಧನವನ್ನಾಗಿ ಒದಗಿಸಿರುತ್ತದೆ. **ಬಾಕಿ** ಹಣವನ್ನು ಚನ್ನಪಟ್ಟಣ ಮಾರುಕಟ್ಟೆ ಸಮಿತಿಯು ಭರಿಸುತ್ತದೆ. ನಿಯಂತ್ರಿತ ಪದಾರ್ಥಗಳ **ವ್ಯಾಪಾರ** ವಹಿವಾಟುಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ನಂತರ **ಉಪಮಾರುಕಟ್ಟೆ** ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಲು ಸಾಧ್ಯವಾಗುವುದು.

ಇ. ಕನಕಪುರ ಉಪಮಾರುಕಟ್ಟೆ ಪ್ರಾಂಗಣ**ದಲ್ಲಿ ನಿಯಂತ್ರಿತ** ಪದಾರ್ಥಗಳ ವ್ಯಾಪಾರ ವಹಿವಾಟುಗಳಿಗೆ ಬೇಕಾದ ಮೂಲಭೂತ **ಸೌಕರ್ಯಗಳನ್ನು** ಒದಗಿಸಲು ಕಾಲಾವಕಾಶ ಬೇಕಾಗಿರುವುದರಿಂದ ಈ ವರ್ಷದಲ್ಲಿ ಕನಕಪುರ ಉಪಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಪಡಿಸಿ, ಅಲ್ಲಿ ವ್ಯಾಪಾರ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:– ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಕ್ಕು ಚ್ಯುತಿ ನಿರ್ಣಯ

ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ (615)ರ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಕ್ರಿಮಿನಲ್ ಕೇಸ್‌ಗಳ ಪೆಂಡಿಂಗ್ ಎಂಬುದರ ಬಗ್ಗೆ (ಶ್ರೀ ಗೋಪಿನಾಥ್ ಆರ್. ಸಾಂಡ್ರ) ರವರ ಬಗ್ಗೆ.

† ಶ್ರೀ ಆರ್.ವಿ. **ದೇಶಪಾಂಡೆ (ವಿರೋಧ ಪಕ್ಷದ** ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಿವಿಲೇಜ್ **ಅನ್ನು ಪ್ರಶ್ನೋತ್ತರ ಅವಧಿಯ** ನಂತರ ತೆಗೆದುಕೊಳ್ಳಬೇಕಾಗುತ್ತದೆಂದು ನಿಮಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವೈ.ಕೆ. **ರಾಮಯ್ಯ**:– ಮಾನ್ಯ ಅಧ್ಯಕ್ಷರೆ, ನಾನು ಕಳುಹಿಸಿರುವ ಪ್ರಿವಿಲೇಜ್ ಅನ್ನು ತೆಗೆದುಕೊಳ್ಳುತ್ತೀರೋ, ಇಲ್ಲವೋ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ರಾಮಯ್ಯನವರೆ, ರೂಲ್ಸ್ ಆಫ್ ಪ್ರೊಸೀಜರ್ ಇದೆ. ನಾನು ಕಳುಹಿಸಿರುವ ಪ್ರಿವಿಲೇಜ್ ಬಹಳ ಮುಖ್ಯವಾದುದಾಗಿದೆ. That has to be taken only after question hour.

ಶ್ರೀ ವೈ.ಕೆ. ರಾಮಯ್ಯ:– ನಿಮಗಿಂತ ಮೊದಲೇ ನಾನು ಮಾನ್ಯ ಅಧ್ಯಕ್ಷರಿಗೆ ಪ್ರಿವಿಲೇಜ್